ಮೈಸೂರ ಗೆಜೆಟ್ಟ

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 15, ಸ॥ 1887.

ಗಮನ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್‌ರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ತಾರೀಖು 11ನೇ ಸೆಪ್ಟಂಬರ್ 1887.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರಿಂದ 43ನೇ ಮೈಲಿಯಲ್ಲಿರುವ ಹೆಗ್ಗಡದೇವನಕೋಟೆ ತಾಲ್ಲೂಕು ನಿಸನ ಸ್ಥಳದಲ್ಲಿ ಹೊಸದಾಗಿ ಹಿಡಿಯಲ್ಪಟ್ಟ ಈ ಕೆಳಗೆ ನಮೂದು ಮಾಡಲ್ಪಡುವ ಆನೆಗಳು ಮತ್ತು ಈ ಮಧ್ಯ ಲಾಲದಲ್ಲಿ ಹಿಡಿಯಲ್ಪಡುವ ಆನೆಗಳು ಸಹ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಸೂಪರ್‌ಟೆಂಡೆಂಟರವರಿಂದ ಸ॥ 1887ನೇ ಇಸವಿ ನವಂಬರ್ 14ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ನಂಬರು.	ಹೆಸರುಗಳು.	ಜಾತಿ.	ಎತ್ತರ. ಅಡಿ.	ಎತ್ತರ. ಅಂಗುಲ.	ಹಿಡಿಯಲ್ಪಟ್ಟ ತಿಂಗಳು.	ಷರಾ.
1	ಗಜಲಕ್ಷ್ಮಿ ..	ಹೆಣ್ಣು.	4	10	1887ನೇ ಏಪ್ರಿಲ್	
2	ಸದಾಶಿವ ..	ಗಂಡು	4	5	ಡಿಟೋ ಜೂನ್	
3	ಶುಕಾರಿ ..	ಹೆಣ್ಣು.	4	0	ಡಿಟೋ ಆಗಸ್ಟ್	

ಷರತ್ತುಗಳು—ಶೇಕಡಾ 25 ರೂಪಾಯಿ ಪ್ರಕಾರ ತೇವಣಿ ಮೊಬಲಗನ್ನು ಕೂಡ್ಲಿ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿ ಪಾವತೀ ಮಾಡತಕ್ಕದ್ದು. ಬಾಕಿ ಮೊಬಲಗನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳೊಳಗಾಗಿ ಮತ್ತು ಆನೆಗಳನ್ನು ಸಾಗಿಸಿಕೊಳ್ಳುವದಕ್ಕೆ ಮುಂಚಿತವಾಗಿ ಪಾವತೀ ಮಾಡಲಿಕು, ಇದಕ್ಕೆ ತಪ್ಪಿದರೆ ತೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಆನೆಗಳು ಪುನಶ್ಚ ಹರಾಜ್ ಮಾಡಲ್ಪಡುವವು ಸಪ್ಪಕ್ಕೆ ಅವಲ್ ಖರೀದಿದಾರನು ಗುರಿಯಾಗತಕ್ಕದ್ದು. ಹರಾಜಿನಲ್ಲಿ ಜಾಸ್ತಿ ಹುಟ್ಟಿದರೆ ಅದರಲ್ಲಿ ಆತನಿಗೆ ಯೇನೂ ಸಲ್ಲಲಾರದು.

ಖರೀದಿ ತಾರೀಖು ಲಾಗಾಯಿತು ಖರೀದಿದಾರನೇ ಆನೆಗಳ ರಾತೀಪು ವಗೈರೆ ಖರ್ಚುಗಳನ್ನ ಪಸಿಸತಕ್ಕದ್ದು.

ತಾರೀಖು 5ನೇ ಅಕ್ಟೋಬರ್ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದೇಶದಲ್ಲಿ ವುತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜಿಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬುಜುರ್ದಲ್ಲಿ ನಮೂಬಿಸಿರುವ ತಾರೀಖುಗಳಲ್ಲಿ ಆಯಾಯ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗಾ ಡಿಸ್ಟ್ರಿಕ್ಟು—ಶಿಕಾರಿಪುರದ ಕೋಠಿ	10ನೇ ನವಂಬರ್ 1887.	ಹೆಚ್ಚುಕಡಮೆ	250 ಟನ್‌ಗಳು.
ಅನಂತಪುರದ ಕೋಠಿ	14ನೇ ಡಿಟೋ	..	50 ಡಿಟೋ
ಶಿವಮೊಗ್ಗಾ ಡಿಟೋ	19ನೇ ಡಿಟೋ	..	500 ಡಿಟೋ
ತೀರ್ಥಹಳ್ಳಿ ಡಿಟೋ	25ನೇ ಡಿಟೋ	..	200 ಡಿಟೋ
ಕಡೂರು ಡಿಸ್ಟ್ರಿಕ್ಟು—ಚಿಕ್ಕಮಗಳೂರು ಕೋಠಿ	1ನೇ ಡಿಸೆಂಬರ್ 1887.	..	200 ಡಿಟೋ
ಹಾಸನ ಡಿಸ್ಟ್ರಿಕ್ಟು—ಹಾಸನ ಕೋಠಿ	7ನೇ ಡಿಟೋ	..	300 ಡಿಟೋ
ಮೈಸೂರು ಡಿಸ್ಟ್ರಿಕ್ಟು—ಶ್ರೀರಂಗಪಟ್ಣ ಕೋಠಿ	12ನೇ ಡಿಟೋ	..	800 ಡಿಟೋ
ಹುಣಸೂರು ಡಿಟೋ	16ನೇ ಡಿಟೋ	..	
ಬೆಂಗಳೂರು ಡಿಸ್ಟ್ರಿಕ್ಟು—ಬೆಂಗಳೂರು ಕೋಠಿ	20ನೇ ಡಿಟೋ	..	150 ಡಿಟೋ

ಪರಾಜಿನ ಪರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ಮರ್ತುಂಗಳ 34, 35ನೇ ನಂಬರು ಗೆಜೆಟ್ ಗಳಲ್ಲಿ ಪ್ರಾಯಿಷ್ ಮಾಡಲ್ಪಟ್ಟ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು ಮತ್ತು ಸದರೀ ಇಸ್ತಿಹಾರ್‌ಗಳು ಹರಾಜ್ ಕಾಲದಲ್ಲಿ ಓದಲ್ಪಡುವವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟ್‌ನಲ್ಲಿ.

1887ನೇ ಇಸವಿ ಮಿ॥ ಅರ್ಜೀ ನಂಬರ್ 877.

ಮೃತಪಟ್ಟ ಕಾಮಂಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಗುಡ್ಡಪ್ಪ ಮೃತಪಟ್ಟ ಸದರೀ ಕಾಮಂಣರವರಿಗೆ ತಮ್ಮ ನಾಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗೂರು ಸ್ಥಳದ ಗುಡ್ಡಪ್ಪನೆಂಬುವರು ಸದರಿ ವಾಸಸ್ಥರಾಗಿ ಮೃತಪಟ್ಟ ಕಾಮಂಣನವರ ಜಿಂದಗೀ ಬಗ್ಯಾಗಿ ಬರತಕ್ಕ 2000 ರೂಪಾಯಿಗಳ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪ್ರಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗುಡ್ಡಪ್ಪನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 28ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಾಮಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

ಸ॥ 1887ನೇ ಇಸವಿ ಅಕ್ಟೋಬರ್ ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ತರಗಿನಪೇಟೀಲಿರುವ ವೀರಸಂಗಣ್ಣನವರ ರುದ್ರಪ್ಪನ ವಿಷಯದಲ್ಲಿ—

ಸ॥ 1887ನೇ ಇಸವಿ ದಿವಾಳೀ ಮಿ॥ ಕೇಸ್ ನಂಬರ್ 263.

ಹುಕ್ಕುಂ.

ಮೇಲ್ಕಂಡ ರುದ್ರಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಒಪ್ಪವು ಸಬ್ ಜಡ್ಜಿಯವರಾದ ಮೆ॥ ಸಿ. ಕೈಸ್ ಸಾಹೇಬರವರ ರೂಬರೂ ಅರ್ಜೀದಾರನಾದ ರುದ್ರಪ್ಪನ ಪರವಾಗಿ ಮೆ॥ ಅಡ್ವೊಕೇಟ್ ನಾರಾಯಣರಾವ್ ಯವರನ್ನ ಮತ್ತು ಸದರೀ ಯವನ ಲೇಣೇದಾರ್ರಾದ 3ನೇ ಮುನಿಸುಪ್ಪನವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.